**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್, ಬಸವನ ಬಾಗೇವಾಡಿ.**

**ಸಿ.ಸಿ. 645/2023** ***ಪ್ರಾಸಃ 12***

***ಚಾಸಾಃ 21***

| | |
|---|---|
| **ಹೆಸರು** | ರಾಜಶೇಖರ ಬಿರಾದಾರ |
| **ತಂದೆಯ ಹೆಸರು** | ನಿಂಗನಗೌಡ |
| **ವಯಸ್ಸು** | 64 ವರ್ಷ |
| **ವೃತ್ತಿ** | ನಿವೃತ್ತ ಪಿ.ಎಸ್.ಐ |
| **ವಿಳಾಸ** | ವಿಜಯಪೂರ |

**ಸಾಕ್ಷಿಯನ್ನು ಇಂದು ದಿನಾಂಕಃ 04.08.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**,

1. ನಾನು ದಿಃ 23.06.2022 ರಿಂದ 16.11.2022 ರವರೆಗೆ ಕೋಲಾರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 16.10.2022 ರಂದು ಮಧ್ಯಾಹ್ನ 02.00 ಗಂಟೆಗೆ ಚಾಸಾ-22 ರವರು ತಾವು ಪಡೆದಿರುವ ಚಾಸಾ-1 ರವರ ಹೇಳಿಕೆಯ ದೂರನ್ನು ಚಾಸಾ-16 ರವರ ಮೂಲಕ ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಹೇಳಿಕೆಯ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನೆ ನಂಬರ್ 120/2022 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ. ನಂತರ ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-22 ರವರಿಗೆ ನೀಡಿರುತ್ತೇನೆ.

3. ಸಾಕ್ಷಿಯು ತಾವು ಸ್ವೀಕರಿಸಿದ ಹೇಳಿಕೆಯನ್ನು ದೂರನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23 ಎ ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ ವಿ.ಜಿ.ಕೆ ವಕೀಲರಿಂದಃ</u>**

1. ಅಪಘಾತವಾದ ಸ್ಥಳಕ್ಕೆ ನಾನು ಹೋಗಿಲ್ಲ ಎಂದರೆ ಸರಿ. ಚಾಸಾ-1 ರವರು ಹೇಳಿಕೆಯ ದೂರನ್ನು ಕೊಟ್ಟಿರುತ್ತಾರೆ. ನಾನು ಚಾಸಾ-1 ರವರಿಂದ ಹೇಳಿಕೆಯ ದೂರನ್ನು ಪಡೆದು ಪ್ರ.ವ.ವರದಿಯನ್ನು ದಾಖಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**